ಕಚ್ಚಾರೇಷ್ಮೆ ಸರಬರಾಜು ಮಾಡುವ ಬಗ್ಗೆ

1629: ಶ್ರೀ ಜಿ.ಎಸ್. ಶಿವಸಂಜಪ್ಪ (ಗುಬ್ಬಿ):– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ ಕಲ್ಲೂರು ಗ್ರಾಮದಲ್ಲಿ ಕೆ.ಹೆಚ್.ಡಿ.ಸಿ. ವತಿಯಿಂದ ರೇಷ್ಮೆ ಮಗ್ಗಗಳನ್ನು ನಡೆಸುತ್ತಿರುವುದು ನಿಜವಲ್ಲವೇ;

2. ಕಚ್ಚಾ ರೇಷ್ಮೆ ಸರಬರಾಜು ಸರಿಯಾಗಿ ಆಗುತ್ತಿಲ್ಲವೆಂಬುದು ನಿಜವಲ್ಲವೆ: ಇದರಿಂದ ಕಾರ್ಮಿಕರಿಗೆ ತೊಂದರೆಯಾಗುವುದಿಲ್ಲವೆ, ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

3. ಸಿದ್ಧ ಉಡುಪುಗಳಿಗೆ ಸರಿಯಾಗಿ ರೇಷ್ಮೆ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಾದರೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗುವುದು (ವಿವರಣೆ ನೀಡುವುದು) ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

1. ನಿಜ.

2. ನಿಜವಲ್ಲ. ಕಚ್ಚಾ ರೇಷ್ಮೆಯನ್ನು ಸರಿಯಾಗಿ ಸರಬರಾಜು ಮಾಡಲಾಗುತ್ತಿದೆ.

3. ಗಮನಕ್ಕೆ ಬಂದಿಲ್ಲ.

ರಾಜ್ಯದಲ್ಲಿ 92–93ರಲ್ಲಿ ಫೆಬ್ರುವರಿ ಅಂತ್ಯದವರೆವಿಗೆ ಉತ್ಪನ್ನವಾಗಿರುವ ರೇಷ್ಮೆ 6548 ಟನ್ನುಗಳು ಕಳೆದ ವರ್ಷಕ್ಕೆ ಹೋಲಿಸಿದಾಗ ಉತ್ಪನ್ನ 1554 ಟನ್ನು ಜಾಸ್ತಿಯಾಗಿದೆ. ರಾಜ್ಯದಲ್ಲಿ ಉತ್ಪನ್ನವಾದ ರೇಷ್ಮೆ ಸುಮಾರು ಶೇಕಡಾ 50 ರಷ್ಟು ಮಾತ್ರ ರಾಜ್ಯದಲ್ಲಿ ಬಳಕೆಯಾಗುತ್ತಿದೆ. ಉಳಿದದ್ದು ಹೊರ ರಾಜ್ಯಗಳಿಗೆ ಮಾರಾಟವಾಗುತ್ತಿದೆ. ಆದುದರಿಂದ ರೇಷ್ಮೆ ರಾಜ್ಯದಲ್ಲಿ ಬೇಕಾದುದಕ್ಕಿಂತ ಜಾಸ್ತಿ ಉತ್ಪನ್ನವಾಗುತ್ತಿದೆ.

Programmes undertaken by SC & ST Development Corporation.

2000: Sri k. Siddaiah (Sonthemaralli):– Will the Minister for Social Welfare be pleased to state.

a) The amount alloted to SCs & STs Development Corporation for 1987–88, 1988–89, 1989–90, 1990–91, 1991–92 and the amount actually spent during the last five years;

b) The various programmes undertaken by the Corporation;

c) The powers of Supervision and control, if any, exercised by the said corporation?

SRI DHARAMSINGH (Minister for Social Welfare):–

a) Total amount allotted Rs.3250.565 lakhs.

Total amount spent Rs.3661.91 lakhs. (the excess amount spent out of recoveries and out of unspent balance of previous years).

b) Self-employment programme, Land Owning Scheme, Individual Irrigation Borewell programme, Rehabilitation of Devadasis programme, Rehabilitation of Atrocity victims, Skill Development programme, Rehabilitation of Sweepers and Scavengers, Energisation of Borewells in Sch.Castes lands, Enterprenuership Development programme. Lift Irrigation, Dry land Development programme.

c) The Board of Directors and the Managing Director of the Corporation have full powers and control over the activities of corporation.

ಉಡುಪಿ ಪುರಸಭೆಯ ಕುಡಿಯುವ ನೀರಿನ ಯೋಜನೆಯ ಮಂಜೂರಾತಿ ಕುರಿತು

1662: ಶ್ರೀ ಎ. ರುಕ್ಮಯ್ಯ ಪೂಜಾರಿ (ಏಟ್ಪ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಉಡುಪಿ ಪುರಸಭೆಯ ಪರಿಸರದ ಹಿರಿಯಡ್ಕ ಹೆಗ್ಗಾರ, ಶಿವಳ್ಳಿ, ಬೈಲಚಾರು ಮತ್ತು ಮಲ್ಪೆ ಹಾರ್ಬರ್, ಪ್ರಾಜೆಕ್ಟ್ ಇವುಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ; ಇಹರ ವೆಚ್ಚವನ್ನು ಯಾರು ಭರಿಸುತ್ತಾರೆ;

ಆ. ಇನ್ನು ಮುಂದೆ ಕೂಡ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಕ.ನ.ನೀ.ಸ.ಒ.ಚ. ಮಂಡಲಿ ಇವರು ನಿರ್ವಾಹಕ ನಿರ್ದೇಶಕರುರವರು ಸದರಿ ಯೋಜನೆಗೆ ಹೆಚ್ಚುವರಿಯಾಗಿ 2ಎಂ.ಜಿ.ಡಿ. ನೀರು ಸರಬರಾಜು ಬಗ್ಗೆ ಅಂದಾಜು ಪಟ್ಟಿ ತಯಾರಿಸಿ ಮಂಜೂರಾತಿಗಾಗಿ ನಗರಾಭಿವೃದ್ಧಿ ಕಾರ್ಯದರ್ಶಿಯವರಿಗೆ ಕಳುಹಿಸಿದೆಯೇ;

ಇ. ಮಂಜೂರಾತಿಯಾಗಿದೆಯೇ; ಆಗದೇ ಇದ್ದರೆ ಯಾಕೆ, ಯಾವಾಗ ಮಂಜೂರಾತಿ ನೀಡುವಿರಿ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಹೌದು.

ಉಡುಪಿ ಪುರಸಭೆಯು ನಿರ್ವಹಣೆ ವೆಚ್ಚವನ್ನು ಭರಿಸುತ್ತದೆ.

ಆ. ರೂ.395 ಲಕ್ಷಗಳ ಮೊತ್ತಕ್ಕೆ ತಯಾರಿಸಿದ ಅಂದಾಜು ಪಟ್ಟಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ. ಇಲ್ಲ.

ನಕ್ಷೆ ಮತ್ತು ಅಂದಾಜು ಪಟ್ಟಿಯು ಆಡಳಿತಾತ್ಮಕ ಅನುಮೋದನೆಯ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.